ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965

# ಮತ್ತು

# ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು, 1968

(2) ನಿಯೋಜಕನು, ನೋಟಿಸನ್ನು ಸ್ವೀಕರಿಸಿದ ಹದಿನಾಲ್ಕು ದಿವಸಗಳೊಳಗೆ ಅದನ್ನು ಪಾಲಿಸತಕ್ಕುದು.

(3) ಸಂದಾಯ ಮಾಡಿಲ್ಲದ ಸಂಚಯಗಳಿಗೆ ಕ್ಲೇಮುಗಳನ್ನು ಆಹ್ವಾನಿಸುವ ನೋಟೀಸಿನ ವಿವರಗಳು ನಮೂನೆ 'ಗ'ದಲ್ಲಿರತಕ್ಕುದು.

**5. ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ಪರಿಶೋಧನೆ:-** (1) ಮಂಡಲಿಯ ಲೆಕ್ಕ ಪತ್ರಾಧಿಕಾರಿಯು ನಿಧಿಯ ಲೆಕ್ಕಪತ್ರಗಳನ್ನು ತಯಾರಿಸತಕ್ಕುದು ಮತ್ತು ಇಟ್ಟುಕೊಂಡು ಬರತಕ್ಕುದು ಮತ್ತು ಅವುಗಳನ್ನು ವರ್ಷಕ್ಕೊಮ್ಮೆ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರನು ಪರಿಶೋಧಿಸತಕ್ಕುದು. ವೆಲ್‌ಫೇರ್ ಕಮೀಷನರನು ಲೆಕ್ಕಪರಿಶೋಧನಾ ಟಿಪ್ಪಣಿಯನ್ನು ವಿಲೆ ಮಾಡುವುದಕ್ಕಾಗಿ ಜವಾಬ್ದಾರನಾಗಿರತಕ್ಕುದು.

(2) ಮಂಡಲಿಯು ಸಂಪೂರ್ಣ ಮತ್ತು ನಿಷ್ಕೃಷ್ಟ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರತಕ್ಕುದು ಮತ್ತು ಈ ಬಗ್ಗೆ ಪ್ರಕ್ರಿಯೆಯು, ಕರ್ನಾಟಕ ಹಣಕಾಸು ಸಂಹಿತೆಯಲ್ಲಿ ನಿರ್ಧಿಷ್ಟಪಡಿಸಿರುವಂತೆಯೇ ಇರತಕ್ಕುದು. ಲೆಕ್ಕಪತ್ರಗಳನ್ನು ಪ್ರತಿವರ್ಷ ಮಾರ್ಚ್ 31 ರಂದು ಸರಿದೂಗಿಸತಕ್ಕುದು;

ಪರಂತು, ಮಂಡಲಿಯು ಮಾಡಿಕೊಂಡ ಅರ್ಜಿಯ ಮೇಲೆ ರಾಜ್ಯ ಸರ್ಕಾರವು ಸದರಿ ದಿನಾಂಕವನ್ನು ಮೂವತ್ತು ದಿವಸಗಳ ಮೀರದ ಅವಧಿಯಿಂದ ವಿಸ್ತರಿಸಬಹುದು.

(3) ವಾರ್ಷಿಕ ಲೆಕ್ಕಪತ್ರಗಳನ್ನು ವಿವರಿಸತಕ್ಕುದು ಮತ್ತು ಯಾವ ಹಣಕಾಸು ವರ್ಷಕ್ಕೆ ಅವು ಸಂಬಂಧಪಡುವವೋ ಆ ಹಣಕಾಸು ವರ್ಷವು ಮುಕ್ತಾಯವಾದ ತರುವಾಯ ಬರುವ ಪ್ರತಿ ಜೂನ್ 15ರಂದು ಅಥವಾ ಅದಕ್ಕೆ ಮುಂಚೆ ಪರಿಶೀಲನೆಗಾಗಿ, ರಾಜ್ಯ ಲೆಕ್ಕ ಪತ್ರಗಳ ಕಂಟ್ರೋಲರನ ಮುಂದೆ ಅಥವಾ ರಾಜ್ಯ ಲೆಕ್ಕ ಪತ್ರಗಳ ಕಂಟ್ರೋಲರನು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯ ಮುಂದೆ ಹಾಜರು ಪಡಿಸತಕ್ಕುದು ;

ಪರಂತು, ಮಂಡಲಿಯು ಮಾಡಿಕೊಂಡ ಅರ್ಜಿಯ ಮೇಲೆ ರಾಜ್ಯ ಸರ್ಕಾರವು ಸದರಿ ದಿನಾಂಕವನ್ನು ಮೂವತ್ತು ದಿವಸಗಳನ್ನು ಮೀರದ ಅವಧಿಯಿಂದ ವಿಸ್ತರಿಸಬಹುದು.

(4) ಲೆಕ್ಕಪರಿಶೋಧನ ವರದಿಯ ಸಹಿತ ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಲಿಯು ಸಾಮಾನ್ಯ ಮೋಹರನ್ನು ಹಾಕುವ ಮೂಲಕ